


# ಮಹಿಳಾ ಕ್ರಿಕೆಟ್ ಕಣ್ಮಣಿಗಳು

(37ನೇ ಪುಟದಿಂದ)

ನಡೆದಾಗ ಕನ್ನಡದಲ್ಲಿ ಮಾತನಾಡಿ ಕರ್ನಾಟಕದವರ ಅಭಿಮಾನಕ್ಕೆ ಪಾತ್ರರಾದರು. ಇಂಗ್ಲಿಷ್ ಮಾಡನಾಡಲು ಹಿಂಜರಿಕೆ ಇದ್ದರೂ ಬ್ರಿಟಿಷರ ನೆಲದಲ್ಲಿ ರಾಜೇಶ್ವರಿ ಮಾಡಿದ ಮೋಡಿ ದೊಡ್ಡದು. ಟೂರ್ನಿಯ ಆರಂಭದ ಪಂದ್ಯಗಳಲ್ಲಿ ಅವರಿಗೆ ಅವಕಾಶ ಸಿಕ್ಕಿರಲಿಲ್ಲ. ಆದರೆ ಲಭಿಸಿದ ಮೊದಲ ಅವಕಾಶದಲ್ಲಿಯೇ ತಮ್ಮ ಕೈಚಳಕ ಸಾಬೀತು ಮಾಡಿದರು. ಅದರಿಂದಾಗಿ ಸೆಮಿಫೈನಲ್ ಮತ್ತು ಫೈನಲ್ ಆಡುವ ಅವಕಾಶವೂ ಸಿಕ್ಕಿತು.

2014ರಲ್ಲಿ ಅವರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಇಲ್ಲಿಯವರೆಗೆ 30 ಪಂದ್ಯಗಳನ್ನು ಆಡಿ 54 ವಿಕೆಟ್‌ಗಳನ್ನು ಗಳಿಸಿದ್ದಾರೆ. ಮೂಲಸೌಲಭ್ಯಗಳ ಕೊರತೆ ಇರುವ ವಿಜಯಪುರದಲ್ಲಿ ಅವರ ಆಸಕ್ತಿ ಮತ್ತು ಪರಿಶ್ರಮವೇ ಮೇಲುಗೈ ಸಾಧಿಸಿದ್ದು ಈಗ ಇತಿಹಾಸದ ಪುಟ ಸೇರಿದೆ. ವಿಜಯಪುರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಬಾಲ್ಯದಿಂದಲೂ ಜಾವೆಲಿನ್ ಮತ್ತು ಡಿಸ್ಕಸ್ ಥ್ರೋಗಳಲ್ಲಿ ಪ್ರತಿಭೆ ಪ್ರದರ್ಶಿಸುತ್ತಿದ್ದ ರಾಜೇಶ್ವರಿ, ಜಿಲ್ಲಾ ವಾಲಿಬಾಲ್ ತಂಡದಲ್ಲಿಯೂ ಆಡುತ್ತಿದ್ದರು. ಅವರು ಕ್ರಿಕೆಟ್‌ಗೆ ಬಂದಿದ್ದು ಆಕಸ್ಮಿಕ. ಅದೇ ಮೈದಾನದಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಮಹಿಳಾ ಕ್ರಿಕೆಟ್ ತರಬೇತಿ ಅಕಾಡೆಮಿಯನ್ನು ಆರಂಭಿಸಿತು. ಅಲ್ಲಿ ಸೇರಿಕೊಂಡ ರಾಜೇಶ್ವರಿ ಮತ್ತು ಅವರ ಸಹೋದರಿ ರಾಮೇಶ್ವರಿ ಅವರ ಬದುಕು ಹೊಸ ತಿರುವು ಪಡೆಯಿತು. ರಾಜೇಶ್ವರಿ ಅವರಿಗೆ ಉತ್ತಮ ಭವಿಷ್ಯವಿದೆ.

## ಕಡೂರಿನ ಕುಡಿ ವೇದಾ

ಚಿಕ್ಕಮಗಳೂರು ಜಿಲ್ಲೆಯ ಪುಟ್ಟ ಊರು ಕಡೂರು ಈಗ ವಿಶ್ವ ಕ್ರೀಡಾ ಭೂಪಟದಲ್ಲಿ ಕಾಣಿಸಿಕೊಂಡಿದೆ. ಅದಕ್ಕೆ ಕಾರಣರಾದವರು ವೇದಾ ಕೃಷ್ಣಮೂರ್ತಿ. ಮಧ್ಯಮಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಈ ಹುಡುಗಿ ತಂಡವು ಸಂಕಷ್ಟದಲ್ಲಿದ್ದಾಗಲೆಲ್ಲ ಎದುರಾಳಿ ಬೌಲರ್‌ಗಳ ಬೆವರಿಳಿಸಿ ನಗು ಬೀರಬಲ್ಲವಳು. ಈ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಲು ಗೆಲ್ಲಲೇ–ಬೇಕಾಗಿದ್ದ ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಅವರು ಗಳಿಸಿದ ಮಿಂಚಿನ ಅರ್ಧಶತಕ (70; 45ಎಸೆತ, 7ಬೌಂಡರಿ, 2ಸಿಕ್ಸರ್) ಮರೆಯಲು ಸಾಧ್ಯವೇ ಇಲ್ಲ. ಆದರೆ ಆ ಪಂದ್ಯದಲ್ಲಿ ಮಿಥಾಲಿ ಶತಕ ಮತ್ತು ರಾಜೇಶ್ವರಿ ಕೈಚಳಕದಿಂದಾಗಿ ವೇದಾ ಆಟಕ್ಕೆ ಹೆಚ್ಚು ಪ್ರಚಾರ ಸಿಕ್ಕಿರಲಿಲ್ಲ. 40 ಏಕದಿನ ಪಂದ್ಯಗಳನ್ನು ಆಡಿರುವ ಅನುಭವ ಅವರ ಬೆನ್ನಿಗೆ ಇದೆ. ಲೆಗ್‌ಸ್ಪಿನ್ ಬೌಲಿಂಗ್ ಕೂಡ ಮಾಡುವ ಪ್ರತಿಭಾನ್ವಿತ ಆಟಗಾರ್ತಿ.

## ಇತಿಹಾಸ ಬರೆದ ಕೌರ್

ವಿಶ್ವಕಪ್ ಸೆಮಿಫೈನಲ್‌ನಲ್ಲಿ ಹರ್ಮನ್‌ಪ್ರೀತ್ ಕೌರ್ ಅವರ ಆಟ ನೋಡಿ–ದವರು ವೀರೇಂದ್ರ ಸೆಹ್ವಾಗ್, ಸಚಿನ್ ತೆಂಡೂಲ್ಕರ್, ಕ್ರಿಸ್ ಗೇಲ್ ಅವರ ಬ್ಯಾಟಿಂಗ್ ನೆನಪಿಸಿಕೊಂಡಿರಬಹುದು. ಈ ಪಂಜಾಬಿ ಹುಡುಗಿ ಅದಕ್ಕಿಂತಲೂ ಅಮೋಘವಾದ ಬ್ಯಾಟಿಂಗ್ ಮಾಡುವಷ್ಟು ಸಮರ್ಥರಾಗಿದ್ದಾರೆ. ಕ್ರಿಕೆಟ್‌ನ ಮೂರು ಮಾದರಿಗಳಲ್ಲಿಯೂ ಮಿಂಚುವ ಪ್ರತಿಭೆ ಅವರದ್ದು. ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಎದುರು ಅವರು ನಿರ್ಭಯವಾಗಿ ಬ್ಯಾಟ್ ಬೀಸಿದ್ದರು. ಅಜೇಯ ಇನಿಂಗ್ಸ್ ಆಡಿದ್ದ ಕೌರ್ ಅವರಿಗೆ ಅಂದು ಇನ್ನಷ್ಟು ಎಸೆತಗಳನ್ನು ಆಡುವ ಅವಕಾಶ ಸಿಕ್ಕಿದ್ದರೆ ದ್ವಿಶತಕ ಬಾರಿಸುವ ಸಾಧ್ಯತೆಯೂ ಇತ್ತು.

2009ರಲ್ಲಿ ಪಾಕಿಸ್ತಾನ ತಂಡದ ಎದುರು ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಕೌರ್ ಅವರ ಖಾತೆಯಲ್ಲಿ ಈಗ 2025 ರನ್‌ಗಳಿವೆ. ನಿಯಮಿತ ಓವರ್‌ಗಳ ಕ್ರಿಕೆಟ್‌ಗೆ ಹೇಳಿ ಮಾಡಿಸಿದ ಆಲ್‌ರೌಂಡರ್ ಅವರಾಗಿದ್ದಾರೆ. ಟ್ವೆಂಟಿ–20 ಮಾದರಿಯಲ್ಲಿಯೂ 1223 ರನ್ ಗಳಿಸಿದ್ದಾರೆ.

## ಪೂನಮ್ ಬೆಳದಿಂಗಳು

ಈ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡಕ್ಕೆ ಆದ ಲಾಭವೆಂದರೆ ಉತ್ತಮ ಆರಂಭಿಕ ಬ್ಯಾಟ್ಸ್‌ವುಮನ್ ದೊರೆತಿರುವುದು. ಅವರೇ ಪೂನಮ್ ರಾವುತ್.

ಉತ್ತರಪ್ರದೇಶದ ಬಲಗೈ ಬ್ಯಾಟ್ಸ್‌ವುಮನ್ ಪೂನಮ್ ಈ ಟೂರ್ನಿಯ ಲೀಗ್ ಹಂತದಲ್ಲಿ ಆಸ್ಟ್ರೇಲಿಯಾ ಎದುರು ಬಾರಿಸಿದ್ದ ಶತಕದ ಸೊಬಗು ಕ್ರಿಕೆಟ್ ಅಭಿಮಾನಿಗಳ ಮನದಲ್ಲಿ ಅಚ್ಚೊತ್ತಿದೆ. ಬ್ರಿಸ್ಟಲ್‌ನ ಅಂಗಳದಲ್ಲಿ ಅವರು ಹೊಡೆದಿದ್ದ 106 ರನ್‌ಗಳು ತಾಳ್ಮೆಯುತ ಬ್ಯಾಟಿಂಗ್‌ಗೆ ಉದಾ–ಹರಣೆಯಾಗಿತ್ತು. ಅದೇ ಪಂದ್ಯದಲ್ಲಿ ಅವರು ಮಿಥಾಲಿ ರಾಜ್ ಜೊತೆಗೆ ಇನಿಂಗ್ಸ್ ಕಟ್ಟಿದ್ದರಿಂದಾಗಿ ತಂಡವು 200ರ ಗಡಿ ದಾಟಲು ಸಾಧ್ಯವಾಗಿತ್ತು. ಆದರೆ ಆ ಪಂದ್ಯದಲ್ಲಿ ಭಾರತ ಸೋತಿತ್ತು.